ಓ.ಎಸ್. ನಂ. 17/2016
ಡಿ.ಡಬ್ಲ್ಯೂ: 1
ದಿನಾಂಕ:- 17-11-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಶ್ರೀ ಕೆವಿಪಿ ರವರಿಂದ:**

ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಹಾಗೂ ತೆಲುಗು ಭಾಷೆ ಬರುತ್ತದೆ ಅಂತ ಹೇಳಿದ್ದು ಸ್ಥಳೀಯ ವಕೀಲರ ಸಂಘದ ಸದಸ್ಯರಾದ ಶ್ರೀ ಶಿವಪ್ಪ ಇವರನ್ನ ಭಾಷಾಂತರರು ಅಂತ ನೇಮಿಸಿ ಭಾಷಾಂತರ ಶುಲ್ಕ ಅಂತ 500 ರೂಪಾಯಿ ನಿರ್ಣಯಿಸಲಾಯಿತು.

ವಾದಿಗಳು ನನಗೆ ಗೊತ್ತು, ವಾದಿಗಳ ತಂದೆ ವೆಂಕಟಪ್ಪ ಕೂಡ ನನಗೆ ಗೊತ್ತು. 1 ರಿಂದ 6ನೇ ಪ್ರತಿವಾದಿಗಳು ನನಗೆ ಗೊತ್ತು, ವಾದಿಗಳ ತಂದೆಯ ಬಗ್ಗೆ ನನಗೆ ಗೊತ್ತು. ನಾನು ವ್ಯವಸಾಯ ಅಲ್ಲದೆ ಇಟ್ಟಿಗೆ ವ್ಯಾಪಾರ ಕೂಡ ಮಾಡುತ್ತೇನೆ. ನಾನು ಇಲ್ಲಿಯವರೆಗೆ ಸುಮಾರು ಸ್ಥಿರಾಸ್ಥಿಗಳನ್ನ ಕ್ರಯಕ್ಕೆ ಪಡೆದುಕೊಂಡಿರುತ್ತೇನೆ. ಆಸ್ತಿಯನ್ನ ಖರೀದಿ ಮಾಡುವ ಪೂರ್ವದಲ್ಲಿ ನಾನು ವಿಚಾರಣೆ ಮಾಡಿರುತ್ತೇನೆ. 1ನೇ ಪ್ರತಿವಾದಿ ನಮ್ಮ ಊರಿನವ ಆದ್ದರಿಂದ ನನಗೆ ಆತನ ಬಗ್ಗೆ ಗೊತ್ತು, ಹಣಕ್ಕಾಗಿ ಆಸೆಪಟ್ಟು ವಾದಿಗಳು ಈ ಕೇಸನ್ನ ಹಾಕಿದ್ದಾರೆ. ಆ ರೀತಿ ದಾವಾ ಪತ್ರದಲ್ಲಿ ಬರೆದಿಲ್ಲ, ವಾದಿಗಳ ಮದುವೆಯಾದ ವಿಷಯ ಗೊತ್ತು ಆದರೆ ಯಾವ ಊರಿಗೆ ಮದುವೆ ಮಾಡಿಕೊಟ್ಟಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ದಾವಾಸ್ತಿ ಕರ್ನಾಟದಲ್ಲಿದೆ ಎಂದರೆ ನಿಜ. ದಾವಾಸ್ತಿ ವೆಂಕಟಪ್ಪನ ಪಿತ್ರಾರ್ಜಿತ ಆಸ್ತಿ ಎಂದರೆ ಸಾಕ್ಷಿಯು 1ನೇ ಪ್ರತಿವಾದಿ ಅದು ವೆಂಕಟಪ್ಪನ ಸ್ವಂತ ಆಸ್ತಿ ಅಂತ ಹೇಳಿದ್ದಾರೆ ಎನ್ನುತ್ತಾರೆ. ದಾವಾಸ್ತಿಯನ್ನ ವೆಂಕಟಪ್ಪ ಕೊಂಡುಕೊಂಡಿದ್ದಾನೆ. ಸದರಿ ವೆಂಕಟಪ್ಪ 1ನೇ ಪ್ರತಿವಾದಿಗೆ ದಾವಾಸ್ತಿಯನ್ನ ಬಿಟ್ಟುಕೊಟ್ಟಿದ್ದಾರೆ. ಸದರಿ ನಿಡಿ-2 ರ ಮೂಲ ದಾಖಲಾತಿ ಎಲ್ಲಿ ಇದೆ ಎಂದರೆ ಸಾಕ್ಷಿಯು ನನಗೆ 1ನೇ ಪ್ರತಿವಾದಿ ಅದನ್ನ ಕೊಟ್ಟಿಲ್ಲ ಎನ್ನುತ್ತಾರೆ. ದಾವಾಸ್ತಿಯನ್ನ ಖರೀದಿ ಮಾಡುವ ಸಮಯದಲ್ಲಿ ಅದರ ಪಹಣಿಯಲ್ಲಿ 1ನೇ ಪ್ರತಿವಾದಿ ಹಾಗೂ ಆತನ ಹೆಂಡತಿಯ ಹೆಸರು ಇತ್ತು, ನಿಡಿ2 ರಲ್ಲಿ ಅದರಲ್ಲಿಯ ಆಸ್ತಿ ಅವರಿಗೆ ಕೊಡಲಾಗಿದೆ ಅಂತ ಕಾಣಿಸಲಾಗಿದೆ. ನಿಡಿ2 ಕ್ಕೆ ಯಾರು ಸಾಕ್ಷಿ ಅಂತ ಸಹಿ ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ, 1ನೇ ಪ್ರತಿವಾದಿ ಈಗಲೂ ಜೀವಂತ ಇದ್ದಾನೆ. ನಿಡಿ2 ನ್ನ 2015 ರಲ್ಲಿ ಪಡೆದಿದ್ದೇನೆ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ಆಮೇಲೆ

ವಕೀಲರು ಉತ್ತರ ಕೊಡಿ ಅಂದಾಗ ಹೌದು ಎನ್ನುತ್ತಾರೆ. ನನ್ನ ಕ್ರಯಪತ್ರದ ಮೂಲ ದಾಖಲಾತಿಯನ್ನ ನಿಡಿ-25 ಎಂದು ಹಾಜರು ಮಾಡಿದ್ದೇನೆ. ನಿಡಿ-25 ಕ್ಕೆ 2ನೇ ಪ್ರತಿವಾದಿ ಹಾಗೂ ಒಬ್ಬ ಸುಬ್ರಮಣಿ ಎಂಬುವವರು ಸಾಕ್ಷಿ ಅಂತ ಸಹಿ ಮಾಡಿದ್ದಾರೆ. ದಾವಾಸ್ತಿ ಒಂದು ಜಮೀನು ಎಂದರೆ ನಿಜ. ಒಂದು ಜಮೀನನ್ನ ಭೂ ಪರಿವರ್ತನೆ ಮಾಡದೆ ಅದನ್ನ ಬೇರೆ ಉದ್ದೇಶಕ್ಕೆ ಉಪಯೋಗಿಸಲು ಬರುವುದಿಲ್ಲ ಎಂದರೆ ನಿಡಿ-16 ರ ಪ್ರಕಾರ ಪಂಚಾಯಿತಿಯವರು ಲೈಸೆನ್ಸ್ ಕೊಟ್ಟಿದ್ದಾರೆ ಎನ್ನುತ್ತಾರೆ. ದಾವಾಸ್ತಿಯಲ್ಲಿ ನಾನು ಇಟ್ಟಿಗೆ ಕಾರ್ಖಾನೆ ಇಟ್ಟಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಗೆ ಉಲುಕೂರು ಪಂಚಾಯಿತಿಯವರು ಲೈಸೆನ್ಸ್ ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-16 ನ್ನ ಯಾವ ಸರ್ವೆ ನಂಬರ್‌ಗೆ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ನಿಡಿ16 ನ್ನ ಪರಿಶೀಲಿಸಿ ಅದರಲ್ಲಿ ದಾವಾಸ್ತಿಯ ನಂಬರ್ ಬರೆದಿಲ್ಲ ಎನ್ನುತ್ತಾರೆ ಆದರೆ ಅದು ದಾವಾಸ್ತಿಗೆ ಸಂಬಂಧಪಟ್ಟಿದ್ದು ಎನ್ನುತ್ತಾರೆ. ದಾವಾಸ್ತಿಯಲ್ಲಿ ನಾನು ಸ್ವಲ್ಪ ಸ್ವಲ್ಪವಾಗಿ ಕಟ್ಟಡ ಕಟ್ಟಿರುತ್ತೇನೆ ಆದರೆ ಅದಕ್ಕೂ ಮುಂಚೆ ಇಟ್ಟಿಗೆಯನ್ನ ತಯಾರು ಮಾಡುತ್ತಿದ್ದೇವು ಆದರೆ ಕಟ್ಟಡ ಇರಲಿಲ್ಲ. ಈ ವಿಷಯವನ್ನ ನಾನು ನನ್ನ ಲಿಖಿತ ಹೇಳಿಕೆಯಲ್ಲಿ ಹೇಳಿಲ್ಲ. ನಿಡಿ-17 ಮತ್ತು 18 ರ ದಾಖಲಾತಿಗಳನ್ನ ಪಂಚಾಯಿತಿಯವರು ಕೊಟ್ಟ ದಾಖಲೆ ಎಂದರೆ ನಿಜ. ನಿಡಿ-17 ಹಾಗೂ 18 ರ ಬಾಬತ್ತು ಪಂಚಾಯಿತಿಯವರು ಠರಾವು ಮಾಡಿದ್ದಾರೆ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ಮತ್ತೆ ಕೇಳಿದಾಗ ಗೊತ್ತಿಲ್ಲ ಎನ್ನುತ್ತಾರೆ. ದಾವಾಸ್ತಿಯಲ್ಲಿ ಮನೆ ಕಟ್ಟಲು ಅನುಮತಿ ಪತ್ರ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ನಿಡಿ-17 ಹಾಗೂ 18 ರ ದಾಖಲಾತಿಗಳೇ ಅನುಮತಿ ಪತ್ರ ಎನ್ನುತ್ತಾರೆ. ನಾನು ಅಂತಹ ಯಾವುದೇ ಅನುಮತಿ ಪತ್ರವನ್ನ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯ ಬಾಬತ್ತಿನ ಕಂದಾಯ ಕಟ್ಟುತ್ತಿದ್ದೇನೆ. ನಿಡಿ-13 ರಲ್ಲಿ ನನ್ನ ಹೆಸರನ್ನ ಹೊರತುಪಡಿಸಿ ಬೇರೆ ಯಾವುದೇ ವಿವರಣೆ ಇರುವು ದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ಕನ್ನಡ ಬರುವುದಿಲ್ಲ ಆದ್ದರಿಂದ ಗೊತ್ತಿಲ್ಲ ಎನ್ನುತ್ತಾರೆ. ಆದ್ದರಿಂದ ನೀವು ಹಾಜರು ಮಾಡಿದ ದಾಖಲೆ ಬಗ್ಗೆ ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಗೊತ್ತು ಎನ್ನುತ್ತಾರೆ. ವಿದ್ಯುತ್‌ಚ್ಛಕ್ತಿ ಸಂಪರ್ಕ ಕೋರಿ ಬೆಸ್ಕಾಂ ಅವರಿಗೆ ಕೊಟ್ಟ ಅರ್ಜಿಯ ಪ್ರತಿಯನ್ನ

ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಿಡಿ-13 ಅಕ್ರಮ ಸಂಪರ್ಕವನ್ನ ಸಕ್ರಮ ಮಾಡಿ ಕೊಟ್ಟ ಅರ್ಜಿ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ಮತ್ತೆ 2-3 ಸರ್ತಿ ಕೇಳಿದಾಗ ಅದು ಎನ್‌ಓಸಿ ಎನ್ನುತ್ತಾರೆ. ಪ್ರತಿವಾದಿಗಳ ಹೆಸರಿನ ದಾಖಲೆಗಳನ್ನ ನಿಮಗೆ ಯಾರು ಕೊಟ್ಟರು ಎಂದರೆ ಸಾಕ್ಷಿ ಪ್ರತಿವಾದಿಗಳು ನಮ್ಮ ಊರಿನವರು ಹಾಗೂ ಅವರ ಆಸ್ತಿಯ ಬಗ್ಗೆ ನನಗೆ ಗೊತ್ತು. ಆದ್ದರಿಂದ ನಾನೇ ಪಡೆದುಕೊಂಡಿದ್ದೇನೆ ಎನ್ನುತ್ತಾರೆ. ದಾವಾಸ್ತಿ ವೆಂಕಟಪ್ಪನಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿ ಎಂದರೆ ಸರಿಯಲ್ಲ. ಈ ಕೇಸ್‌ನಲ್ಲಿ ನನಗೆ ವಕೀಲರ ನೋಟಿಸ್ ಬಂದಿತ್ತು ಎಂದರೆ ನಿಜ. ವಾದಿಗಳಿಗೆ ವೆಂಕಟಪ್ಪ ಆಗಲೀ ಅಥವಾ 3ನೇ ಪ್ರತಿವಾದಿಯಾಗಲೀ ಏನಾದರೂ ಪಾಲು ಕೊಟ್ಟಿದ್ದಾರಾ ಅಥವಾ ಇಲ್ಲ ಎಂದರೆ ಸಾಕ್ಷಿ ಅವರು ಮದುವೆಯಾಗಿ ಹೋಗಿದ್ದಾರೆ ಆದ್ದರಿಂದ ಅವರಿಗೆ ಏನು ಕೊಟ್ಟಿದ್ದಾರೆ ಏನು ಇಲ್ಲ ಎಂಬುದು ನನಗೆ ಗೊತ್ತಿಲ್ಲ. ದಾವಾಸ್ತಿ ವೆಂಕಟಪ್ಪನಿಗೆ ಸರ್ಕಾರದಿಂದ ಮಂಜೂರಾದ ಆಸ್ತಿ ಆದರೆ ಸ್ವಯಾರ್ಜಿತ ಆಸ್ತಿ ಅಲ್ಲ ಎಂದರೆ ಸಾಕ್ಷಿ ಸ್ವಯಾರ್ಜಿತ ಆಸ್ತಿ ಎನ್ನುತ್ತಾರೆ. ವೆಂಕಟಪ್ಪಕ್ಕಿಂತ ಮುಂಚೆ ಒಬ್ಬ ರಾಮಸ್ವಾಮಿ ಎಂಬುವವರು ದಾವಾಸ್ತಿಯ ಸ್ವಾಧೀನದಲ್ಲಿದ್ದರು ಎಂದರೆ ನಿಜ. ವಾದಿಗಳು ಹಾಜರು ಮಾಡಿದ ಪಹಣಿಗಳನ್ನ ನಾನು ಪರಿಶೀಲನೆ ಮಾಡಿದ್ದೇನೆ. ಅವುಗಳು ನೈಜ ದಾಖಲೆಗಳು. ನಿಡಿ2 ಒಂದು ಸುಳ್ಳು ದಾಖಲೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ನಿಡಿ-2 ನ್ನ ಬರೆದುಕೊಡುವ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯನ್ನ ಖರೀದಿ ಮಾಡುವ ಪೂರ್ವದಲ್ಲಿ ನಾನು ಯಾವುದೇ ರೀತಿಯ ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ವಾದಿಗಳಿಗೆ ಏನಾದರೂ ಹಕ್ಕು ಇದೆಯಾ ಅಥವಾ ಇಲ್ಲ ಎಂಬುದನ್ನ ನಾನು 1ನೇ ಪ್ರತಿವಾದಿಯೊಂದಿಗೆ ವಿಚಾರಿಸಿದ್ದು ಆಗ 1ನೇ ಪ್ರತಿವಾದಿ ವಾದಿಗಳು ಮದುವೆ ಮಾಡಿಕೊಂಡು ಹೋಗಿದ್ದು ಅವರಿಗೆ ದಾವಾಸ್ತಿಯಲ್ಲಿ ಹಕ್ಕು ಇರುವುದಿಲ್ಲ ಅಂತ ಹೇರುತ್ತಾನೆ. ವಾದಿಗಳಿಗೆ ನ್ಯಾಯಯುತವಾಗಿ ಬರತಕ್ಕ ಪಾಲನ್ನ ತಪ್ಪಿಸುವ ದುರುದ್ದೇಶದಿಂದ ನಾನು ಮತ್ತು 1ನೇ ಪ್ರತಿವಾದಿ ಶಾಮೀಲಾಗಿ ನಿಡಿ-2 ನ್ನ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿಗಳಿಗೆ ದಾವಾಸ್ತಿಯಲ್ಲಿ ಹಕ್ಕು ಇದೆ ಎಂದರೆ ಸರಿಯಲ್ಲ. ವಾ ದಿಗಳಿಗೆ ದಾವಾಸ್ತಿಯಲ್ಲಿ ಹಕ್ಕು ಇರುವ ವಿಷಯ ನನಗೆ ಸ್ವಂತಕ್ಕೆ ಗೊತ್ತಿದೆ ಎಂದರೆ ಸರಿಯಲ್ಲ.

ಅದ್ದರಿಂದ ನಾನು ದಾವಾಸ್ತಿಯನ್ನ ಅತೀ ಕಡಿಮೆ ಬೆಲೆಗೆ ಖರೀದಿಸಿದ್ದೇನೆ ಎಂದರೆ ಸರಿಯಲ್ಲ. ದಾವೆಯನ್ನ ದಾಖಲು ಮಾಡಿದ ನಂತರ ನಾನು ನಿಡಿ-13, 16, 17 ಹಾಗೂ 18 ಗಳನ್ನ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

**(ಮಹೇಶ ಶಂ.ಪಾಟೀಲ)**
ಸಿ/ಸಿ ಹಿರಿಯ ಸಿ.ಜೆ ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್